Anand
WATER STORAGE TANKS
Made out of
100% VIRGIN
Plastic Granules.
200 TO 5000 LITERS CAPACITY
Manufacturers:
Anand Polymers
www.anandpolymers.net
Shivally Industrial Area
MANIPAL - 576 104
Phone: 0820 - 2575403

ಸಾಪ್ತಾಹಿಕ
ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ

CENTRAL LIBRARY

Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ರವಿವಾರ, ಮಾರ್ಚ್ 25, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 16+8+4

# ಹ್ಯಾಂಡ್‌ಬಾಲ್: ಸಹ್ಯಾದ್ರಿ ತಂಡ ಚಾಂಪಿಯನ್



ಮಂಗಳೂರು, ಮಾ. 24: ನಗರದ ಹೊರವಲಯದ ಅಡ್ಯಾರ್ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಹಾಗೂ ಮ್ಯಾನೇಜ್‌ಮೆಂಟ್‌ನ ವಿದ್ಯಾರ್ಥಿಗಳು ಶಿವಮೊಗ್ಗ ಜೆಎನ್‌ಎನ್‌ಸಿಇಯಲ್ಲಿ ನಡೆದ ವಿಟಿಯು ಇಂಟರ್ ಝೋನ್ ಮಹಿಳಾ ಹ್ಯಾಂಡ್‌ಬಾಲ್ ಪಂದ್ಯಾವಳಿಯಲ್ಲಿ ಚಾಂಪಿಯನ್ಸ್ ಆಗಿ ಹೊರಹೊಮ್ಮಿದ್ದಾರೆ.

ಸಹ್ಯಾದ್ರಿ ಕಾಲೇಜು ತಂಡದಲ್ಲಿ ವಿದ್ಯಾರ್ಥಿನಿಯರಾದ ಸತ್ವಿಕಾ ಜೆ. ರಾಯ್(ನಾಯಕಿ), ಶ್ರೀಲಕ್ಷ್ಮೀ, ಅನನಿಯಾ ಎ. ಶೆಟ್ಟಿ, ಕೃಪಾ ಎಸ್.ಆರ್., ಸ್ವಾತಿ, ಗೌರಿ ಗಣೇಶ್, ಪ್ರತಿಭಾ ಭಟ್, ಬಿಂದಿಯಾ ಮೈನ್ಸನ್, ರಕ್ಷಿತಾ, ಸಮಕ್ಷಾ, ಸಲೀಖಾ ಶಮಾ, ಮನೀಶಾ ಎ. ಅನುರಾಧಾ ಭಾಗವಹಿಸಿದ್ದರು.

ಭಂಡಾರಿ ಫೌಂಡೇಶನ್ ಅಧ್ಯಕ್ಷ ಡಾ। ಮಂಜುನಾಥ್ ಭಂಡಾರಿ, ಸಹ್ಯಾದ್ರಿ ಶೈಕ್ಷಣಿಕ ಸಂಸ್ಥೆಗಳ ನಿರ್ದೇಶಕ ಡಾ। ಡಿ.ಎಲ್. ಪ್ರಭಾಕರ ಮತ್ತು ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲ ಡಾ। ಉಮೇಶ್ ಎಂ. ಭುಶಿ ಮಾರ್ಗದರ್ಶನದಲ್ಲಿ ಕಾಲೇಜು ತಂಡ ಸ್ಪರ್ಧೆಯಲ್ಲಿ ಭಾಗವಹಿಸಿತ್ತು.

ಸಂಪುಟ Volume 60 | ಸಂಚಿಕೆ Issue 58 | ಪುಟ Pages 14+6
epaper.samyukthakarnataka.com
ಮಂಗಳೂರು Mangaluru | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಕಲಬುರಗಿ Kalaburagi | ದಾವಣಗೆರೆ Davanagere



# ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ
samyukthakarnataka
ಎಂಟು ದಶಕದ ನಂಟು

CENTRAL LIBRARY

ಕ್ಲಬ್ ಕ್ರಿಕೆಟ್ ಪಂದ್ಯದಲ್ಲಿ ವಿಕೆಟ್‌ಕೀಪರ್ ವೃದ್ಧಿಮಾನ್ ಸಹಾ ಕೇವಲ 20 ಎಸೆತಗಳಲ್ಲಿ 102 ರನ್ ಗಳಿಸಿದರು.

ಭಾನುವಾರ 25 Sunday | ಮಾರ್ಚ್ 2018 March | ₹ 5-00

ದಿವಂಗತ ನಟಿ ಶ್ರೀದೇವಿ ಅವರ ಪುತ್ರಿ ಜಾಹ್ನವಿ ಕಪೂರ್ ತಮ್ಮ ಧಡಕ್ ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿ ಕಾಣಿಸಿಕೊಂಡ ಸಂದರ್ಭ.




ಮಂಗಳೂರು: ಶಿವಮೊಗ್ಗದ ಜೆಎನ್‌ಎನ್‌ಸಿಇಇ ಯಲ್ಲಿ ಇತ್ತೀಚೆಗೆ ನಡೆದ ವಿಟಿಯು ಇಂಟರ್ ಝೋನ್ ಮಹಿಳಾ ಹ್ಯಾಂಡ್ಬಾಲ್ ಪಂದ್ಯಾವಳಿಯಲ್ಲಿ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳು ಚಾಂಪಿಯನ್ಸ್ ಆಗಿ ಹೊರಹೊಮ್ಮಿದ್ದಾರೆ. ಭಂಡಾರಿ ಫೌಂಡೇಶನ್ ಅಧ್ಯಕ್ಷ ಡಾ.ಮಂಜುನಾಥ್ ಭಂಡಾರಿ, ಸಹ್ಯಾದ್ರಿ ಶೈಕ್ಷಣಿಕ ಸಂಸ್ಥೆಗಳ ನಿರ್ದೇಶಕ ಡಾ.ಡಿಎಲ್ ಪ್ರಭಾಕರ, ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲ್ ಡಾ.ಉಮೇಶ್ ಎಂ.ಭುಶಿ ವಿಜೇತ ವಿದ್ಯಾರ್ಥಿ ತಂಡವನ್ನು ಅಭಿನಂದಿಸಿದ್ದಾರೆ.

ಭಾನುವಾರ, ಮಾರ್ಚ್ 25, 2018 | ₹ 5.00
www.prajavani.net
/prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY

ಜಾಗೃತಿ
ಕರ್ಕಶ ಹಾರ್ನ್ ಬಳಸುವುದರ ವಿರುದ್ಧ ಜಾಗೃತಿ ಮೂಡಿಸಲು ಮುಂಬೈನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕ್ರಿಕೆಟ್ ಆಟಗಾರರಾದ ಶಿಖರ್ ಧವನ್ ಮತ್ತು ಯುವರಾಜ್ ಸಿಂಗ್ ಪಾಲ್ಗೊಂಡಿದ್ದರು



### ಭಾವಿ ಎಂಜಿನಿಯರ್‌ಗಳಿಗೆ ಮಾರ್ಗದರ್ಶನ

# 29ರಂದು ಸಹ್ಯಾದ್ರಿಯಲ್ಲಿ 'ಕಿಂಡ್ಲ್' ಸ್ಪರ್ಧೆ

• ಡಿ.ಕೆ.ಬಸವರಾಜು

ಡಾಕ್ಟರ್ ಆಗಬೇಕು ಎಂದು ಕನಸು ಕಾಣುವ ಇಂದಿನ ವಿದ್ಯಾರ್ಥಿಗಳು ಮೆಡಿಕಲ್ ಸೀಟು ಸಿಗದೇ ಇದ್ದರೆ ಮಾತ್ರ ಎಂಜಿನಿಯರ್ಗೆ ಬರುತ್ತಾರೆ. ಎಂಜಿನಿಯರ್ ಆಗಬೇಕು ಎಂಬ ಧ್ಯೇಯವನ್ನು ಇಟ್ಟುಕೊಂಡು ಅಭ್ಯಾಸ ಮಾಡುವವರು ಕಡಿಮೆ. ಈ ನಿಟ್ಟಿನಲ್ಲಿ ಎಂಜಿನಿಯರ್ ಕನಸು ಕಾಣುವ ವಿದ್ಯಾರ್ಥಿಗಳಿಗೆ ಅದರ ಮಹತ್ವವನ್ನು ತಿಳಿಸುವ ಉದ್ದೇಶದಿಂದ ಇದೇ 29ರಂದು ಸಹ್ಯಾದ್ರಿ ಕಾಲೇಜಿನಲ್ಲಿ 'ಕಿಂಡಲ್' ಹೆಸರಿನಲ್ಲಿ ಮಾರ್ಗದರ್ಶನ ಶಿಬಿರ ನಡೆಯಲಿದೆ. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಭಾಗವಹಿಸಬಹುದು.

'ಇನ್‌ಸ್ಪೈರಿಂಗ್ ಯೂತ್ ಥ್ರೂ ಟೆಕ್ನಾಲಜಿ' ಎಂಬ ಧ್ಯೇಯದೊಂದಿಗೆ ನಡೆಯುವ ಈ ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ಸಲಹೆ, ಮಾರ್ಗದರ್ಶನ ಹಾಗೂ ತರಬೇತಿ ನೀಡಲು ಉದ್ದೇಶಿಸಿದೆ. ಕಾಲೇಜಿನ ಡಿ.ಟಿ.ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್‌ನ ಸಹಯೋಗದಲ್ಲಿ ಈ ಶಿಬಿರ ನಡೆಯಲಿದೆ.

ಕ್ಯಾಂಪಸ್

ಸಹ್ಯಾದ್ರಿ ಎಂಜಿನಿಯರ್ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳು ವಿವಿಧ ಐಐಟಿಗಳಲ್ಲಿ ಭಾಗವಹಿಸಿಹಲವು ಬಹುಮಾನಗಳನ್ನು ಪಡೆದಿದ್ದಾರೆ. ಈ ವರೆಗೆ ಕಾಲೇಜಿನ 23 ತಂಡಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಅವುಗಳನ್ನು 19 ತಂಡಗಳು ಬಹುಮಾನ ಪಡೆದಿವೆ. ವಿಜೇತ ತಂಡಗಳ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಜತೆ ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ. ಸ್ಪರ್ಧೆಯಲ್ಲಿನ ವಿಷಯ, ತಂತ್ರಜ್ಞಾನ ಸೇರಿವಿವಿಧ



ವಿಷಯಗಳನ್ನು ಹೇಳುವ ಮೂಲಕ ಅವರನ್ನು ಸ್ಪರ್ಧೆಗೆ ಅಣಿಗೊಳಿಸಲಿದ್ದಾರೆ.

ಅಂದಿನ ಈ ಶಿಬಿರದಲ್ಲಿ ಯಾರೊಬ್ಬರು ಅತಿಥಿಗಳು ಇರುವುದಿಲ್ಲ. ವಿದ್ಯಾರ್ಥಿಗಳನ್ನು ಒಬ್ಬರಿಗೊಬ್ಬರು ಮುಕ್ತವಾಗಿ ಚರ್ಚಿಸಿ ಸಮಸ್ಯೆ ಬಗೆಹರಿಸಿಕೊಳ್ಳಬಹುದು. ಎಂಜಿನಿಯರ್ ಅಂದರೆ ಏನು, ಅದರ ಅನುಭವ ಏನು ಎಂಬುದರ ಬಗ್ಗೆ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಕಲಿಸಿಕೊಡಲಿದ್ದಾರೆ. ಇದು ಭವಿಷ್ಯದ ಎಂಜಿನಿಯರ್‌ಗಳಿಗೆ ಸೂಕ್ತ ಪಥದಲ್ಲಿ ಸಾಗಲು ಅನುಕೂಲವಾಗುತ್ತದೆ.



ಸ್ಪರ್ಧೆಗೆ ಸಜ್ಜುಗೊಳ್ಳುತ್ತಿರುವ ವಿದ್ಯಾರ್ಥಿಗಳು

ವಿದ್ಯಾರ್ಥಿಗಳು ವಿವಿಧ ಐಐಟಿ ಹಾಗೂ ಎನ್‌ಐಟಿಗಳು ನಡೆದ ಸ್ಪರ್ಧೆಗಳಲ್ಲಿ ವಿಜೇತರಾದವರು ತಾವು ತಯಾರಿಸಿ ಮಾದರಿಗಳನ್ನು ಪ್ರದರ್ಶಿಸುವರು. 12 ಮಳಿಗೆಗಳಲ್ಲಿ ಮಾದರಿಗಳನ್ನು ಪ್ರದರ್ಶಿಸಲಿದ್ದು, ಆ ಪ್ರಾಜೆಕ್ಟ್ ಅನ್ನು ತಯಾರಿಸಿದ ಬಗೆ ಹೇಗೆ, ಯಾವ ರೀತಿಸ್ಪರ್ಧೆಯಲ್ಲಿ ಪಾಲ್ಗೊಳ್ಳಬೇಕು. ಸ್ಪರ್ಧೆಗಳು ಯಾವರೀತಿ ನಡೆಯುತ್ತವೆ ಎಂಬುದರ ಮಾಹಿತಿಯನ್ನು ವಿದ್ಯಾರ್ಥಿಗಳು ನೀಡುವರು. ಅಲ್ಲದೇ ಪ್ರಾಜೆಕ್ಟ್ ತಯಾರಿಕೆಗೆ ಬೇಕಾದ ತಾಂತ್ರಿಕ ಗುಣಗಳ ಬಗ್ಗೆಯೂ ಮಾರ್ಗದರ್ಶನ ನೀಡುವರು. ಪ್ರದರ್ಶನದ ನಂತರ ರೊಬೊ ರೇಸ್, ಲೈನ್ ಫಾಲೊವಿಂಗ್ ರೊಬೊಟ್, ರೊಬೊ ಕ್ಲುಮೊ, ರೊಬೊ ಸಾಕರ್ ಹಾಗೂ ವಾಟರ್ ರಾಕೆಟಿಂಗ್ ಎಂಬ 5 ಬಗೆಯ ಸ್ಪರ್ಧೆಗಳು ನಡೆಯಲಿದ್ದು, ವಿದ್ಯಾರ್ಥಿಗಳಿಗೆ ರೊಬೊಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಗುತ್ತದೆ.

## ಉಚಿತ ಸಲಹೆ

'ಎಂಜಿನಿಯರ್ ಆಗಬೇಕು ಎಂದು ಬಯಸುವವರಿಗೆ ತುಡಿತ ಇರಬೇಕು, ಅಲ್ಲದೇ ಸೂಕ್ಷ್ಮ ದೃಷ್ಟಿಕೋನ ಇರಬೇಕು. ನಾನು ಸಾಧನೆ ಮಾಡುತ್ತೇನೆ ಎನ್ನುವ ತುಡಿತವಿರಬೇಕು. ಅಲ್ಲದೇ ಜ್ಞಾನದ ಬೆಳವಣಿಗೆಗೆ ತನ್ನನ್ನು ತಾನು ತೆರೆದುಕೊಂಡಿರಬೇಕು' ಎನ್ನುತ್ತಾರೆ. ಡಿ.ಟಿ.ಲ್ಯಾಬ್ಸ್ ನಿರ್ದೇಶಕ ಜಾನ್ಸನ್ ಟೆಲ್ಲಿಸ್.

'ತಂದೆ-ತಾಯಂದಿರ, ಸ್ನೇಹಿತರ ಒತ್ತಾಯಕ್ಕೆ ಮಣಿದು ಎಂಜಿನಿಯರ್ ಸೇರಬಾರದು. ಸ್ವ ಇಚ್ಛೆಯಿಂದ ಬರಬೇಕು. ವಿದ್ಯಾರ್ಥಿಗಳಿಗೆ ಸೂಕ್ತ ಸಲಹೆ ಮಾರ್ಗದರ್ಶನ ನೀಡುವುದರ ಜತೆಗೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಸಹಾಯ ಮಾಡಲಾಗುವುದು. ವಿದ್ಯಾರ್ಥಿಗಳು ಯಾವಾಗ ಬೇಕಾದರೂ ಸಲಹೆ ಪಡೆಯಬಹುದು' ಎನ್ನುತ್ತಾರೆ. ಸ್ಪರ್ಧೆಯಲ್ಲಿ ಭಾಗವಹಿಸುವವರು ದೂರವಾಣಿ ಸಂಖ್ಯೆ 99456-33622 ಸಂಪರ್ಕಿಸಬಹುದು.

## ಎಂಜಿನಿಯರ್ ಆಗಲು ವೇದಿಕೆ

ಸಹ್ಯಾದ್ರಿ ಕಾಲೇಜು ವಿವಿಧ ಕಾಲೇಜುಗಳ ವಿದ್ಯಾರ್ಥಿಗಳನ್ನು ಕರೆದು ಭವಿಷ್ಯದಲ್ಲಿ ಎಂಜಿನಿಯರ್ ಆಗಲು ಮಾರ್ಗದರ್ಶನ ಮತ್ತು ತರಬೇತಿ ನೀಡುತ್ತಿದೆ. ಇದಕ್ಕಾಗಿಯೇ ಸಹ್ಯಾದ್ರಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ ಅವರು ವಿದ್ಯಾರ್ಥಿಗಳ ಕನಸ್ಸಿಗೆ ಪ್ರೇರಣೆ ನೀಡುವ ಉದ್ದೇಶದಿಂದ ಡಿ.ಟಿ.ಲ್ಯಾಬ್ಸ್



ಪ್ರೈವೇಟ್ ಲಿಮಿಟೆಡ್ ಆರಂಭಿಸಿದರು.

ಸಹ್ಯಾದ್ರಿ ಎಜು ಡ್ರೀಮರ್ಸ್ ಲ್ಯಾಬ್, ತಂತ್ರಜ್ಞಾನದ ಮೂಲಕ ವಿದ್ಯಾರ್ಥಿಗಳ ಕನಸ್ಸನ್ನು ಸಾಕಾರಗೊಳಿಸಲು ಇರುವ ಒಂದು ಪ್ರಯೋಗಾಲಯವಾಗಿದ್ದು, ಇದು ವಿದ್ಯಾರ್ಥಿಗಳಿಗೆ ಬೇಕಾದ ಸಂಪನ್ಮೂಲವನ್ನು ಒದಗಿಸುವುದರ ಜತೆಗೆ ಯುವ ಮನಸ್ಸುಗಳಿಗೆ ಸಂದೇಹ ಮತ್ತು ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಬರೀ ಪದವೀಧರರನ್ನು ಮಾತ್ರ ರೂಪಿಸುವ ಕಾರ್ಯದಲ್ಲಿ ನಿರತವಾಗಿಲ್ಲ. ಉತ್ಕೃಷ್ಟ ಸಾಧನೆಗೆ ಭದ್ರ ವೇದಿಕೆಯನ್ನು ಒದಗಿಸಿ ಅವರಿಗೆ ಯಶಸ್ವಿ ಭವಿಷ್ಯಕ್ಕೆ ಭದ್ರ ಬುನಾದಿಯನ್ನು ಹಾಕಿಕೊಡುವಲ್ಲಿ ನಿರತವಾಗಿದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಶಿಕ್ಷಣದ ಜತೆಗೆ ವಿದ್ಯಾರ್ಥಿಗಳಲ್ಲಿ ಸಂಶೋಧನೆಗೆ ಪ್ರೇರಣೆ, ಉದ್ಯಮಶೀಲತೆಯನ್ನು ಪ್ರೋತ್ಸಾಹಿಸಿ ಯಶಸ್ವಿ ಸಾಧಕರನ್ನಾಗಿ ರೂಪಿಸುವುದು, ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಮುಖ್ಯ ಉದ್ದೇಶ. ಇದನ್ನು ಸಾಕಾರಗೊಳಿಸುವ ದಿಶೆಯಲ್ಲಿ ಶಿಕ್ಷಣದ ಜತೆಗೆ ಯಶಸ್ವಿ ಹಾಗೂ ಹೆಸರಾಂತ ಸಿಇಒ, ಸಿಒಒಗಳು, ಕೈಗಾರಿಕೋದ್ಯಮಿಗಳನ್ನು ಶಿಕ್ಷಣ ಸಂಸ್ಥೆಗೆ ಆಹ್ವಾನಿಸಿ ಅವರಿಂದ ಉಪನ್ಯಾಸಗಳನ್ನು ಆಯೋಜಿಸುತ್ತಾ ಬರುತ್ತಿರುವುದು ಸಂಸ್ಥೆಯ ವೈಶಿಷ್ಟ್ಯ. ಸಹ್ಯಾದ್ರಿ ಎಜು ಡ್ರೀಮರ್ಸ್ ಕಳೆದ ವರ್ಷ 430 ವಿದ್ಯಾರ್ಥಿಗಳನ್ನು ಸ್ಪರ್ಧೆಗೆ ಸಜ್ಜುಗೊಳಿಸಿದ್ದು, ಈ ವರ್ಷವೂ ಹೆಚ್ಚಿನ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಉದ್ದೇಶಿಸಿದೆ.

⌘